4. "ಗಾಡಿ ಜೋಜ" ಅಂದರೆ ಎರಡು ಎತ್ತು ಗಳಿಂದ ಎಳೆಯಲ್ಪಡುವ ನಾಟು ಗಾಡಿಯಲ್ಲಿ ತುಂಬುವಷ್ಟು ಎಂದು ತಿಳಿಯ ತಕ್ಕದ್ದು. ಅದು 20 ಸಲೆ ಅಡಿ ಅಥವ ಅರ್ಧ ಟ್ಯ ನವಾಗಿರತಕ್ಕದ್ದು. ತಲೆ ಹೊರೆ ಎಂದರೆ ಒಂದು ಸಲೆ ಅಡಿ ಅಥವ 56 ಪೌಂಡಿಗೆ ಸಮವಾಗಿರತಕ್ಕದ್ದು.

20 ತಲೆ ಹೊರೆಗಳಿಗೆ = 1 ಗಾಡಿ	4 ತಲೆ ಹೊರೆಗಳಿಗೆ = 1 ಎತ್ತಿನ ಜೋಜ
10 ತಲೆ ಹೊರೆಗಳಿಗೆ = 1 ಎಡ್ಡರ ಗಾಡಿ	2 ತಲೆ ಹೊರೆಗಳಿಗೆ = 1 ಕತ್ತೆ ಜೋಜ

5. ಡಿಸ್ಟ್ರಿಕ್ಟ್ ಫಾರೆಸ್ಟ್ ನಿಬಂಧನೆಗಳ 9ನೇ ಕಲಂ ಮೇರಿಗೆ ಮುಫತ್ತಾಗಿ ಸಾಗಿಸುವುದು ವಿನಹಾ, ಸರ್ಕಾರಕ್ಕೆ ಉಂಬಿಕೊಂ ಡಿರುವ ಅಥವ ಉಳಿಸಿಕೊಳ್ಳದೆ ಇರುವ ಭೂಮಿಯಿಂದ ಮೇಲ್ಕಂಡ ಪಟ್ಟಿಯಲ್ಲಿ ನಮೂದಾಗದೆ ಇರುವ ಮರಗಳು ಮತ್ತು [redacted] ಫಾರೆಸ್ಟ್ ಉತ್ಪತ್ತಿಯನ್ನ ಸಾಗಿಸುವುದಾದರೆ ಅದಕ್ಕೆ ಡೆಪ್ಯೂಟಿ ಕಮಿಷರ್ಯರವರು ಫಾರೆಸ್ಟ್ ಕ್ಯಸರ್ವೇಟರವರ ಅನುಮತಿಯ ಮೇರೆ ಆಗಿಂದಾಗ್ಗೆ ವಿಧಿಸುವ ದರದಂತೆ ತೀರ್ವೆ ಕೊಡಬೇಕು.

ಹುಕುಂ ಬವೋಜೀಬ್,
ಎಂ. ಮುತ್ತಣ್ಣಾ, ರಾಯಿಬಹದ್ದೂರ್,
ಅ॥ ಸೆಕ್ರೆಟರಿ, ಫಾರೆಸ್ಟ್ ಇಲಾಖೆ.

ಮಿಲಿಟರಿ.

ಇಸ್ತಿಹಾರ್‌ನಾಮಾ.

ತಾರೀಖು 16ನೇ ಜುಲೈ 1903.

ನಂ. 141—3, ಮೈಸೂರ ಸಿವಿಲ್ ಸರ್ವಿಸ್ ರೆಗ್ಯುಲೇಷ್ಗಳ 176ನೇ ಸೆಕ್ಷನ್ ಅನುಸರಿಸಿ ಅಸಿಸ್ಟೆಂಟ್ ಕಮಿಷನರ್ ಮತ್ತು ಮಿಲಿಟರಿ ಸ್ಟೋರುಗಳ ಸೂಪರಿಟೆಂಡೆಂಟರಾದ ಮೆ॥ ಜೆ. ಇ. ಟೇಟ್ ಯವರಿಗೆ ಮಾಹೆ ಮಜಕೂರು 6ನೇ ತಾರೀಖಿನಾರಭ್ಯ 3 ದಿನ ಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬವೋಜೀಬ್,
ಆರ್. ಜಿ. ಜೋನ್ಸ್, ಲಿಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.